ನಾಟಕ - ಅಂಬೆ

ಕರ್ತೃ : ಡಾ. ಸರಜೂಕಾಟ್ಕರ್

ಪಾತ್ರಗಳು:

ಕಾಶಿರಾಜ : ಕಾಶಿದೇಶದ ರಾಜ, ಅಂಬೆ, ಅಂಬಿಕೆ, ಅಂಬಾಲಿಕೆಯರ ತಂದೆ, ೬ನೇ ವಯಸ್ಸಿನಲ್ಲಿ ಸ್ವಯಂ ವರದಲ್ಲಿ ನಾಗಕನ್ಯೆಯನ್ನು ವರಿಸಿದವ ಪ್ರತಿಷ್ಠೆಗಾಗಿ ಮಗಳ ಭವಿಷ್ಯವನ್ನು ಬಲಿ ಕೊಟ್ಟವನು

ಅಂಬೆ : ಕಾಶಿರಾಜನ ಜೇಷ್ಠ ಪುತ್ರಿ, (ಹಿರಿಯ ಮಗಳು) ನಾಟಕದ ಮುಖ್ಯ ಪಾತ್ರ, ನಾಟಕದ ನಾಯಕಿ, ಸ್ವಯಂವರ ಪದ್ಧತಿಯ ಬಗೆಗೆ ಅಸಹನೆ, ತಿರಸ್ಕಾರ ಭಾವನೆ ಉಳ್ಳವಳು, ಪುರುಷ ಪ್ರಧಾನ ಸಮಾಜದ ಪ್ರತಿಷ್ಠೆ, ಕ್ರೌರ್ಯಕ್ಕೆ ಬಲಿಯಾದವಳು, ಹೆಣ್ಣಿನ ಸ್ವಾಭಿಮಾನದ, ಅಸ್ಮಿತೆಯ ಪ್ರತೀಕ, ಭೀಷ್ಮರ ಮೇಲಿನ ದ್ವೇಷದಿಂದ ಶಿಖಂಡಿಯಾಗಿ ಹುಟ್ಟಿ ಸೇಡು ತೀರಿಸಿಕೊಂಡವಳು, ತಂದೆ ಕಾಶಿರಾಜ, ಶಾಲ್ವ, ಭೀಷ್ಮರಿಂದ ತಿರಸ್ಕೃತಗೊಂಡವಳು.

ದಾಸಿ : ಕಾಶಿರಾಜನ ಅರಮನೆಯ ದಾಸಿ (ಸೇವಕಿ), ನಿಷ್ಠಾವಂತ ಸೇವಕಿ, ಕಾಶಿರಾಜ ಮತ್ತು ಅವನ ಮಕ್ಕಳ ಬಗೆಗೆ ಅತೀವವಾದ ಕಳಕಳಿ, ಕಾಳಜಿ ಉಳ್ಳವಳು, ಸಂದರ್ಭ ಬಂದಾಗಲೆಲ್ಲಾ, ಕಾಶಿರಾಜನಿಗೆ, ಅಂಬೆಗೆ ಹಾಗೂ ಶಾಲ್ವನಿಗೂ ಕೂಡ ಸಲಹೆ ಸೂಚನೆಗಳನ್ನು ನೀಡುವ ಹೃದಯವಂತೆ.

ಶಾಲ್ವರಾಜ : ಸೌಬಲದೇಶದ ರಾಜ, ಅಂಬೆಯನ್ನು ಹುಲಿಯಿಂದ ರಕ್ಷಿಸಿದವ, ಅಂಬೆಯನ್ನು ವರಿಸುವ ಇಚ್ಛೆಉಳ್ಳವನಾಗಿದ್ದು, ನಂತರ ಭೀಷ್ಮರಿಂದ ಸೋಲಿಸಲ್ಪಟ್ಟನಾಗಿ ಅಂಬೆಯನ್ನು ನಿರಾಕರಿಸುತ್ತಾನೆ. ಅಂಬೆಯಿಂದ ಹೇಡಿ, ನಪುಂಸಕ ಎಂದು ನಿಂದನೆಗೆ ಗುರಿಯಾದವ.

ಭೀಷ್ಮ : ಗಂಗಾಪುತ್ರ, ಆಜನ್ಮ ಬ್ರಹ್ಮಚಾರಿ, ಪರಶುರಾಮರ ಶಿಷ್ಯ, ಚಿಕ್ಕಮ್ಮನಾದ ಸತ್ಯವತಿಯ ಆಶಯದಂತೆ ವಿಚಿತ್ರವೀರ್ಯನಿಗಾಗಿ ಕಾಶಿರಾಜನ ಮಕ್ಕಳಾದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನೂ ಸ್ವಯಂವರದಲ್ಲಿ ಜಯಿಸಿದವನು. ಬ್ರಹ್ಮಚರ್ಯೆದ ಪ್ರತಿಜ್ಞೆಯ ಕಾರಣದಿಂದ ರಾಜಕುಮಾರಿಯರನ್ನೂ ವರಿಸದೆ ಅಂಬೆಯ ಕೋಪಕ್ಕೆ ತುತ್ತಾಗಿ ಕುರುಕ್ಷೇತ್ರ ಯುದ್ಧದಲ್ಲಿ ಶಿಖಂಡಿಯಾಗಿ ಹುಟ್ಟಿ ಅಂಬೆಯಿಂದ ಸೋಲಿಸಲ್ಪಟ್ಟವನು.

ಪರಶುರಾಮ : ಭೀಷ್ಮರ ವಿದ್ಯಾಗುರು, ಜಮದಗ್ನಿಯ ಮಗ, ರಾಜ ಸಹಸ್ರಾರ್ಜುನ ತನ್ನ ತಂದೆ ಜಮದಗ್ನಿಯನ್ನು ಕೊಂದ ಸೇಡಿಗಾಗಿ ೨೩ ಬಾರಿ ಭೂಮಂಡಲವನ್ನು ಸುತ್ತಿ ಕ್ಷತ್ರಿಯ ವಂಶವನ್ನು ನಿರ್ವಂಶ ಮಾಡಿದವನು. ಶಿಷ್ಯ ಭೀಷ್ಮನಿಂದ ಸೋಲಿಸಲ್ಪಟ್ಟವನು

ರಾಜಮಾತೆ ಸತ್ಯವತಿ : ಶಂತನು ಮಹಾರಾಜನ ಎರಡನೆಯ ಪತ್ನಿ, ಭೀಷ್ಮರ ಚಿಕ್ಕಮ್ಮ, ವಿಚಿತ್ರವೀರ್ಯನ ತಾಯಿ, ತನ್ನ ಮಗ ವಿಚಿತ್ರವೀರ್ಯನಿಗೆ ಹಾಗೂ ಅವನ ಮಕ್ಕಳಿಗೆ ಹಸ್ತಿನಾವತಿ ಸಾಮ್ರಾಜ್ಯದ ಅಧಿಪತ್ಯ ದೊರೆಯಬೇಕೆಂಬ ಹಂಬಲ ಉಳ್ಳವಳು, ಸ್ವಾರ್ಥಿ

ನಾಗಕನ್ಯೆ: ನಾಗರಾಜನ ಮಗಳು, ರಾಜಕುಮಾರಿ ನಾಗರಾಜ ಏರ್ಪಡಿಸಿದ್ದ ಸ್ವಯಂವರದಲ್ಲಿ ಇವಳನ್ನು ಕಾಶಿರಾಜ ವರಿಸಿ ತನ್ನರಾಣಿಯನ್ನಾಗಿ ಸ್ವೀಕರಿಸಿರುತ್ತಾನೆ.

ಸತ್ಯಶೀಲ : ಭೀಷ್ಮನ ಸ್ನೇಹಿತ, ಭೀಷ್ಮರ ಬಗೆಗೆ ಅಪಾರವಾದ ಗೌರವ ಹಾಗೂ ಭರವಸೆಯನ್ನಿಟ್ಟುಕೊಂಡವನು.

ದೃಶ್ಯ -೧

ರಾಜಕುಮಾರಿ ಅಂಬೆ ನಾಳಿನ ಸ್ವಯಂವರವನ್ನು ಕುರಿತು ಆಲೋಚಿಸುತ್ತ, ಚಿಂತಾಕ್ರಾಂತಳಾಗಿ ಖಿನ್ನತೆಯಿಂದ ಏಕಾಂತದಲ್ಲಿದ್ದಾಳೆ. ಈ ಸಮಯದಲ್ಲಿ ದಾಸಿಯ ಪ್ರವೇಶವಾಗುತ್ತದೆ. ದಾಸಿ ನಾಳೆಯ ಸ್ವಯಂವರವನ್ನು ಕುರಿತು ಅಂಬೆಯನ್ನು ಛೇಡಿಸುತ್ತಾಳೆ. ರಾಜ ಮಹಾರಾಜರ ದಂಡೆ ಕಾಶಿಗೆ ಬರುತ್ತಿದೆಯೆಂದು, ನಾಳಿನ ಸ್ವಯಂವರದಲ್ಲಿ ನೀವು ಮೂರುಜನ ಸಹೋದರಿಯರು ಒಬ್ಬನನ್ನೇ ವರಿಸುತ್ತೀರೋ ಇಲ್ಲ ಬೇರೆ ಬೇರೆಯವರನ್ನು ವರಿಸುತ್ತೀರೋ ಎಂದು ತಮಾಷೆ ಮಾಡಿ ನಗುತ್ತಾಳೆ. ತಮ್ಮ ರಾಜಕುಮಾರಿಯವರಿಗೆ ಮದುವೆಯಾಗುತ್ತಿದೆಯೆಂದು ಸಹಜವಾಗಿಯೇ

ಸಂತೋಷಪಡುತ್ತ ದಾಸಿ ಈ ಮಾತುಗಳನ್ನು ಹೇಳುತ್ತಾಳೆ. ಆದರೆ ಈ ಮಾತಿನಿಂದ ಅಂಬೆ ನೊಂದುಕೊಳ್ಳುತ್ತಾಳೆ, ಅಸಹನೆಯಿಂದ ಚಡಪಡಿಸುತ್ತಾಳೆ. ಕಾರಣ ಅಂಬೆಗೆ ಈ ಸ್ವಯಂವರದ ರೀತಿ, ನೀತಿಗಳು ಇಷ್ಟವಾಗುವುದಿಲ್ಲ. ಸ್ವಯಂವರದಲ್ಲಿ ಯಾರು ವೀರರೋ ಅವರು ಸ್ವಯಂವರದ ಕನ್ಯೆಯರನ್ನು ವರಿಸುತ್ತಾರೆ. ಇವರು ವೃದ್ಧರೋ, ಹಲವು ಮದುವೆಯಾದವರೋ ಆಗಿರುತ್ತಾರೆ. ಈ ರಾಜರುಗಳಿಗೆ ಸ್ವಯಂವರದಲ್ಲಿ ಭಾಗವಹಿಸುವುದು, ಗೆಲ್ಲುವುದು ಒಂದು ಪ್ರತಿಷ್ಠೆಯಾಗಿರುತ್ತದೆಯೇ ಹೊರತು, ವರಿಸಿದ ಹೆಣ್ಣಿನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ, ಅವರ ಭಾವನೆಗಳ ಜೊತೆ ಸ್ಪಂದಿಸುವ ಸಂವೇದನಾಶೀಲತೆ ಇವರಿಗಿರುವುದಿಲ್ಲ. ಅಂಬೆ ಹೇಳುವಂತೆ ಗೆದ್ದ ರಾಜಕುಮಾರಿಯನ್ನು ತಮ್ಮ ಅರಮನೆಯ ಅಂತಃಪುರಕ್ಕೆ ಸೇರಿಸಿಬಿಟ್ಟರೆ ಇವರ ಜವಾಬ್ದಾರಿ ಮುಗಿದಂತೆ, ಆ ಹೆಣ್ಣಿನ ನೋವು, ನಲಿವುಗಳಿಗೆ ಯಾವ ಬೆಲೆಯು ಇರುವುದಿಲ್ಲ ಇಂತಹ ಸ್ವಯಂವರವನ್ನು ಅಂಬೆ ವಿರೋಧಿಸುತ್ತಾಳೆ. ಅಂಬೆಯ ಈ ನೋವಿನ ಮಾತುಗಳನ್ನು ಕೇಳಿದ ದಾಸಿ ತನ್ನ ಮಾತಿಗೆಕ್ಷಮೆ ಕೇಳಿ, ರಾವಂಶಸ್ಥರ ಬದುಕಿನ ಬಗೆಗಿನ ತನ್ನ ಅರಿವಿನ (ತಿಳುವಳಿಕೆ) ಮಿತಿಯನ್ನು ತಿಳಿಸುತ್ತ, ಅಂಬೆಯನ್ನು ಕಾಡುತ್ತಿರುವ ಚಿಂತೆಯ ಬಗೆಗೆ ವಿಚಾರಿಸುತ್ತಾಳೆ. ಅದಕ್ಕುತ್ತರವಾಗಿ ಅಂಬೆ ಅರಮನೆಯಜೀವನ ಚಿನ್ನದ ಪಂಜರವೆಂದು, ಇಲ್ಲಿ ಸ್ವತಂತ್ರವಿಲ್ಲವೆಂದು, ಅರಮನೆಯ ದಾಸಿಯರಿಗಿರುವ ಸ್ವಚ್ಛಂದ ಬದುಕು ತಮಗಿಲ್ಲವೆಂದು, ಈ ಪಂಜರದಿಂದ ತಪ್ಪಿಸಿಕೊಂಡು ಹೋಗಬೇಕೆಂಬ ಹಂಬಲ ಹಲವು ಬಾರಿ ತನ್ನನ್ನು ಕಾಡಿದೆಯೆಂದು ಹೇಳುತ್ತಾಳೆ. ಓಡಿ ಹೋದರೆ ಕಾಶಿರಾಜನ ಮಗಳೆಂಬ ಪ್ರತಿಷ್ಠೆಗೆ ತನ್ನ ತಂದೆಯ ವಂಶದ ಪ್ರತಿಷ್ಠೆಗೆ ದಕ್ಕೆಯಾಗುತ್ತದೆ ಎಂಬ ಭಯ ನನ್ನ ಬದುಕನ್ನು ಸಂಕಟಮಯಗೊಳಿಸಿದೆ. ಅರಮನೆಯ ಈ ಭೋಗಜೀವನ ಕೇವಲ ಉತ್ಸವ, ಇಲ್ಲಿ ಉತ್ಸಾಹವೇ ಇಲ್ಲ ಎಂದು ತನ್ನ ಸಂಕಟವನ್ನು ತೋಡಿಕೊಳ್ಳುತ್ತಾಳೆ ಅಂಬೆ.

ಮುಂದಿನ ದಾಸಿಯ ಮಾತುಗಳಲ್ಲಿ ಮನುಷ್ಯ ಸ್ವಭಾವದ ಚಿತ್ರಣವಿದೆ. ಇಲ್ಲದ್ದಕ್ಕಾಗಿ ಹಂಬಲಿಸುವುದು ಮನುಷ್ಯ ಸ್ವಭಾವ. ಅರಮನೆಯ ವಾಸಿಗಳು, ಗುಡಿಸಲಿನ ಸ್ವಚ್ಛಂದ ಬದುಕನ್ನು ಕನವರಿಸಿದರೆ, ಗುಡಿಸಲಿನ ವಾಸಿಗಳು ಅರಮನೆಯ ಭೋಗಜೀವನವನ್ನು ಕನವರಿಸುತ್ತಾರೆ. ಅವರವರ ಭಾವಕ್ಕೆ ಅವರಿಗೆ ದೊರಕದ ಬದುಕು ಸುಂದರವಾಗಿರುತ್ತದೆ, ಸುಖಕರವಾಗಿರುತ್ತದೆ ಎಂದೆನಿಸುತ್ತದೆ. ದಾಸಿ ಕಾಶಿರಾಜ ನಾಗಕನ್ಯೆಯನ್ನು ಸ್ವಯಂವರದಲ್ಲಿ ಗೆದ್ದದ್ದನ್ನು, ಆ ಕನ್ಯೆಯ ಜೊತೆ ಬರುತ್ತಿರುವ ಸಂಗತಿಯನ್ನು ಅಂಬೆಗೆ ತಿಳಿಸುತ್ತಾಳೆ.

ಅಂಬೆಗೆ ಈ ವಿಷಯವೇ ದುಃಖಕ್ಕೆ ಕಾರಣವಾಗಿದೆ. ತನ್ನ ತಂದೆ ಕಾಶಿರಾಜನಿಗೆ ೬೦ ವರ್ಷ, ವರಿಸಿರುವ ನಾಗಕನ್ಯೆ ವಯಸ್ಸಿನಲ್ಲಿ ತನಗಿಂತ ಚಿಕ್ಕವಳು, ಈ ವಯಸ್ಸಿನಲ್ಲಿ ತನ್ನ ತಂದೆ ಸ್ವಯಂವರಕ್ಕೆ ತೆರಳಿದ್ದು, ನಾಳಿನ ತನ್ನ ಸ್ವಯಂವರಕ್ಕೆ ಈ ಚಿಕ್ಕ ವಯಸ್ಸಿನ ರಾಣಿಯೊಂದಿಗೆ ತಮ್ಮ ತಂದೆ ಕುಳಿತುಕೊಳ್ಳುವುದು ಅಂಬೆಗೆ ಸಂಕೋಚ, ನಾಚಿಕೆಯ ಹಾಗೂ ದುಃಖದ ವಿಷಯವಾಗಿದೆ. ಆದರೆ ದಾಸಿ ಹೇಳುವಂತೆ ಮಹಾರಾಜರ ಈ ನಡೆ ಜನರಿಂದ ಪ್ರಶಂಸೆಗೆ ಗುರಿಯಾಗಿದೆಯಂತೆ. ರಾಜರ ಪರಾಕ್ರಮವನ್ನು, ಅವರ ಚಿರಯೌವ್ವನವನ್ನು ನಾಡಿನ ಜನತೆ ಒಕ್ಕೊರಲಿನಿಂದ ಹಾಡಿ ಹೊಗಳುತ್ತಿದೆಯಂತೆ. ಅಂಬೆಗೆ ಈ ನಡವಳಿಕೆ ಇಷ್ಟವಾಗುವುದಿಲ್ಲ. ಅಂಬೆಯ ಪ್ರಕಾರ ಇದು ಆಡಂಬರ, ಸತ್ಯದಂತೆ ತೋರುವ ಸುಳ್ಳು, ಅಲ್ಲದೆ ನಾಳಿನ ತನ್ನ ಸ್ವಯಂವರದಲ್ಲಿ ತನ್ನ ತಂದೆಯಂತಹ ಮುದುಕನೊರ್ವ ತನ್ನನ್ನು ಗೆದ್ದುಬಿಟ್ಟರೆ, ವರಿಸಿದರೆ ಎಂಬ ಭಯ ಅಂಬೆಯನ್ನು ಕಾಡುತ್ತಿದೆ.

ಈ ಸಮಯಕ್ಕೆ ಸರಿಯಾಗಿ ಕಾಶಿರಾಜ ತನ್ನ ಹೊಸ ರಾಣಿ ನಾಗಕನ್ಯೆಯೊಡನೆ, ಅಂಬೆಯಿರುವಲ್ಲಿಗೆ ಬರುತ್ತಾನೆ. ತನ್ನಜೇಷ್ಠ ಪುತ್ರಿ ಅಂಬೆಯನ್ನು ನಾಗಕನ್ಯೆಗೆ ಪರಿಚಯಿಸುತ್ತಾನೆ. ಅಂಬೆಯ ಬಿಲ್ವಿದ್ಯೆ ಜಾಣ್ಮೆಯನ್ನು ಹೊಗಳುತ್ತಾನೆ. ಆಗ ಅಂಬೆ ತನ್ನ ತಂದೆ ಸ್ವಯಂವರದಲ್ಲಿ ನಾಗಕನ್ಯೆಯನ್ನು ವರಿಸಿದ್ದನ್ನು, ವ್ಯಂಗ್ಯದ ಮಾತುಗಳಲ್ಲಿ ನಿಂದಿಸುತ್ತಾಳೆ. ಆಗ ಕಾಶಿರಾಜ ಮಗಳ ವ್ಯಂಗ್ಯದ, ನಿಷ್ಠುರದ ಮಾತುಗಳನ್ನು ಅರ್ಥಮಾಡಿಕೊಳ್ಳದೇ ತನ್ನ ಒಣ ಪ್ರತಿಷ್ಠೆಯನ್ನು

ಮೆರೆಯುತ್ತಾನೆ. ಸ್ವಯಂವರದಲ್ಲಿ ಪ್ರತಿಭಟಿಸಿದ ಗಂಧರ್ವ ರಾಜ್ಯದ ರಾಜಕುಮಾರನನ್ನು ಕೊಂದದ್ದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ.

ಇದಕ್ಕುತ್ತರವಾಗಿ ಅಂಬೆ ಕೇಳುವ ನಾಗಕನ್ಯೆಗೆ ವಯಸ್ಸಾದ ನಿಮ್ಮನ್ನು ವರಿಸುವ ಆಸೆಯಿತ್ತೇ ಎಂಬುದು ಕಾಶಿರಾಜನನ್ನು ಗಲಿಬಿಲಿಗೆ ಒಳಗುಮಾಡುತ್ತದೆ. ಉತ್ತರಿಸಲಾಗದೇ ಸುಮ್ಮನಾಗುತ್ತಾನೆ. ಮತ್ತೇ ಪ್ರಶ್ನಿಸಿದ ಅಂಬೆಗೆ ರಾಜರ ಪ್ರವೃತ್ತಿಯ ಬಗೆಗೆ ವಿವರಿಸುತ್ತಾನೆ. ಆಕ್ರಮಣ, ಗೆಲುವು, ಭೋಗ ರಾಜಧರ್ಮವೆಂದು ಇದರಿಂದ ವಿಮುಖನಾದವ ರಾಜನಲ್ಲವೆಂದು ಹೇಳುತ್ತಾನೆ. ಸಾಮ್ರಾಜ್ಯ ವಿಸ್ತರಣೆಗೆ ಆಕ್ರಮಣ ಸರಿ. ಆದರೆ ಭೋಗದ ವಿಷಯದಲ್ಲಿ ಆಂದರೆ ಹೆಣ್ಣಿನ ಸಂಬಂಧದ ವಿಷಯದಲ್ಲಿ ಆಕ್ರಮಣ ಸಲ್ಲದು. ಭೋಗ ಪರಸ್ಪರರ ಒಲವಿನಿಂದ, ಪ್ರೀತಿಯಿಂದ ಲಭಿಸುವ ಸುಖವೆನ್ನುತ್ತಾಳೆ ಅಂಬೆ. ಈ ಮಾತಿನಿಂದ ಕಾಶಿರಾಜ ಕೆರಳುತ್ತಾನೆ. ಅಂಬೆ ಮುಂದುವರೆದು ರಾಜರಾದ ತಾವುಗಳು ಸಾಮ್ರಾಜ್ಯವನ್ನು ಆಕ್ರಮಿಸಿಕೊಳ್ಳುವಂತೆ ಹೆಣ್ಣುಗಳನ್ನು ಆಕ್ರಮಿಸಿಕೊಳ್ಳುತ್ತಾ ಹೊರಟಿದ್ದೀರಿ. ಹೆಣ್ಣು ಆಕ್ರಮಣಕ್ಕೆ ಮಾತ್ರ ಒಲಿಯುವುದಿಲ್ಲ, ಅಲ್ಲಿ ಅರ್ಪಣೆಯೂ ಬೇಕೆನ್ನುತ್ತಾಳೆ.

ನಂತರ ಸ್ವಯಂವರ ಪದ್ಧತಿಯ ಬಗ್ಗೆ ಮಾತಾನಾಡುತ್ತ ಆರಂಭದಲ್ಲಿ ಸ್ವಯಂವರ ಹೆಣ್ಣಿನ ಪರವಾಗಿದ್ದು, ಹೆಣ್ಣು ಸ್ವಯಂವರದಲ್ಲಿ ತನಗೆ ಬೇಕಾದವನನ್ನು ಆರಿಸಿಕೊಳ್ಳುವ ಸ್ವತಂತ್ರವಿತ್ತು, ಆದರೆ ಬರುಬರುತ್ತ ಇದು ಪುರುಷರಾಜರ ಪ್ರತಿಷ್ಠೆಯಾಗಿ, ಪೌರುಷದ ಪ್ರದರ್ಶನವಾಗಿ ಪುರುಷ ಪರವಾಗಿ ಹೆಣ್ಣಿನ ಭಾವನೆಗಳನ್ನು ಕೊಂದು ಹಾಕಿದೆ ಎನ್ನುತ್ತಾಳೆ ಅಂಬೆ.

ಮುಂದಿನ ಅಂಬೆ ಮತ್ತು ಕಾಶಿರಾಜನ ಸಂಭಾಷಣೆಯಲ್ಲಿ ಕಾಶಿರಾಜ ತನ್ನ ವಂಶದ ಹಿರಿಮೆ ಗರಿಮೆಗಳ ಬಗೆಗೆ ಹೇಳಿಕೊಳ್ಳುತ್ತಾನೆ. ಇದಕ್ಕುತ್ತರವಾಗಿ ಅಂಬೆ ಈ ನಿಮ್ಮ ವೈಭವಗಳನ್ನು ನೋಡಿಯೇ ನಾಗರಾಜ ಮರುಳಾಗಿ, ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ನಿಮ್ಮ ಸಂಬಂಧವನ್ನು ಬೆಳೆಸಿದ್ದಾನೆಯೆ ಎಂದು ವ್ಯಂಗ್ಯವಾಗಿ ನಿಂದಿಸುತ್ತಾಳೆ. ಕಾಶಿರಾಜ ಈ ಯಾವ ಮಾತಿನಿಂದಲೂ ವಿಚಲಿತನಾಗದೇ, ಸಂಕೋಚಪಡದೆ ತನ್ನ ಪರಾಕ್ರಮವನ್ನೇ ಮೆರೆಯುತ್ತಾನೆ.

ಶೌರ್ಯ ಪರಾಕ್ರಮದಿಂದ ರಾಜ್ಯಗಳನ್ನು ಗೆಲ್ಲಬಹುದು, ಮುಗ್ಧ ಹೆಣ್ಣಿನ ಹೃದಯಗಳನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ತನ್ನ ತಂದೆಯ ಪೌರುಷವನ್ನು ಖಂಡಿಸುತ್ತಾಳೆ ಅಂಬೆ. ಇದರಿಂದ ಕೋಪಗೊಂಡ ಕಾಶಿರಾಜ ತನ್ನ ವಂಶೋದ್ಧಾರಕ ಗಂಡು ಮಗನೊಬ್ಬ ಬೇಕೆಂತಲೂ, ನೀವು ಮೂವರು ಹೆಣ್ಣುಮಕ್ಕಳೇ ಆಗಿರುವುದರಿಂದ ತನ್ನ ಸಾಮ್ರಾಜ್ಯಕ್ಕೆ ಉತ್ತಾರಾಧಿಕಾರಿ ಇಲ್ಲವೆಂತಲೂ, ಗಂಡು ಸಂತಾನವಿಲ್ಲದಿದ್ದರೆ ಸಾಮ್ರಾಜ್ಯಕ್ಕೆ ಉಳಿಗಾಲವಿಲ್ಲವೆಂದು ನುಡಿಯುತ್ತಾನೆ, ಇದರಿಂದ ಅಂಬೆ ಬೇಸರಗೊಳ್ಳುತ್ತಾಳೆ. ಸಾಮ್ರಾಜ್ಯಕ್ಕೆ ಗಂಡೇ ಉತ್ತರಾಧಿಕಾರಿಯಾದರೆ ಜಗತ್ತೇನು ಉದ್ಧಾರವಾಗುವುದಿಲ್ಲವೆಂದು, ಹೆಣ್ಣೊಬ್ಬಳು ಉತ್ತರಾಧಿಕಾರಿಯಾದರೆ ಜಗತ್ತೇನು ಮುಳುಗಿ ಹೋಗುವುದಿಲ್ಲವೆಂದು ಅಸಹನೆಯಿಂದ ನುಡಿಯುತ್ತಾಳೆ. ಕಾಶಿರಾಜ ಮತ್ತೇ ಪುತ್ರ ಸಂತಾನವಿಲ್ಲದೆ ಹೋದರೆ ಮೋಕ್ಷ ದೊರಕದು ಎಂಬ ಧರ್ಮಶಾಸ್ತ್ರದ ಮಾತನ್ನಾಡುತ್ತಾನೆ. ಇದು ಪುರುಷರಾದವರು ತಮ್ಮ ಅನುಕೂಲಕ್ಕೆ ಮಾಡಿಕೊಂಡ ನಿಯಮವೆಂದು ಪುರುಷ ಪಕ್ಷಪಾತಿಯಾದ ಧರ್ಮಶಾಸ್ತ್ರಗಳನ್ನು ಖಂಡಿಸುತ್ತಾಳೆ ಅಂಬೆ. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ದಾಸಿ ನಾಳಿನ ಸ್ವಯಂವರಕ್ಕೆ ಅಂಬೆ ಸಿದ್ಧವಾಗಬೇಕಾಗಿರುವುದನ್ನು ಕಾಶಿರಾಜನ ವಿಶ್ರಾಂತಿಯ ವಿಷಯವನ್ನು ಪ್ರಸ್ತಾಪಿಸುತ್ತಾಳೆ.

ದಾಸಿಯ ಅಭಿಪ್ರಾಯವನ್ನು ತಿರಸ್ಕರಿಸುವ ಕಾಶಿರಾಜ ತಾನೇನು ದಣಿದು ಬಂದಿಲ್ಲವೆಂದು ಹೇಳುತ್ತಾನೆ. ಅದಕ್ಕೆ ಮತ್ತೆ ಅಂಬೆ ವ್ಯಂಗ್ಯವಾಗಿ ದಣಿದು ಬಂದಿದ್ದಾರೆ ಎಂಬುದು ಅವರ ಸ್ವಾಭಿಮಾನಕ್ಕೆ ಧಕ್ಕೆ, ಈಗ ಅವರು ನೂತನ ಮಧುಮಗ, ಈ ಸಂದರ್ಭದಲ್ಲಿ ದಣಿದು ಬಂದಿದ್ದಾರೆ ಎಂಬುದು ಅವರಿಗೆ ರುಚಿಸುವುದಿಲ್ಲ ಎಂದು ಟೀಕಿಸುತ್ತಾಳೆ.

ಇದರಿಂದ ಬೇಸರಗೊಳ್ಳುವ ಕಾಶಿರಾಜ ನಾಳಿನ ಸ್ವಯಂವರವನ್ನು ನೆನಪಿಸುತ್ತಾ ನಾಳೆ ನೀನು ಮದುವೆಯಾಗುವವಳು ಎನ್ನುತ್ತಾನೆ. ಅಂಬೆಯ ಮುಂದಿನ ಮಾತುಗಳು ಅತ್ಯಂತ ಕಠಿಣವಾದವುಗಳಾಗಿವೆ. ನಾಳಿನ ಸ್ವಯಂವರದಲ್ಲಿ ಯಾವ ಮುದಿಯ ನನ್ನನ್ನು ವರಿಸುತ್ತಾನೋ ಎಂದಿದ್ದಕ್ಕೆ, ಕಾಶಿರಾಜ ಪ್ರಾಯಕ್ಕಿಂತ ಪೌರುಷಕ್ಕೆ ಅಗ್ರಸ್ಥಾನ ಎನ್ನುತ್ತಾನೆ.ಗೆಲ್ಲುವ ರಾಜ ಹೆಣ್ಣಿನ ಮನಸ್ಸನ್ನು ಗೆದ್ದರೆ ಭಲೇ ಎನ್ನಬಹುದು. ನಾಳಿನ ಸ್ವಯಂವರ ಎಂಬುದು ಒಂದು ಹರಾಜಿನ ಪ್ರಕ್ರಿಯೆ. ನನ್ನನ್ನು, ನನ್ನ ಸಹೋದರಿಯರನ್ನು ಹರಾಜು ಹಾಕಿದ್ದೀರಿ. ಇದು ವೇಶ್ಯಾಗಾರಕ್ಕೆ ಹೆಣ್ಣು ಮಕ್ಕಳನ್ನು ಮಾರಾಟ ಮಾಡುವ ಜಾಲದಂತೆ ತೋರುತ್ತದೆ ಎಂದು ಅಂಬೆ ಟೀಕಿಸುತ್ತಾಳೆ. ಇದರಿಂದ ಕೋಪಗೊಂಡ ಕಾಶಿರಾಜ ವಿಶ್ರಾಂತಿ ಬೇಕೆಂದು ತೆರಳಲು ಸಿದ್ಧನಾದಾಗ ಮತ್ತೆ ಅಂಬೆ ಈಗಲಾದರೂ ವಿಶ್ರಾಂತಿ ಬೇಕೆಂದು ಹೇಳಿದಿರಲ್ಲ, ನಿಮ್ಮ ಈ ಪ್ರಾಮಾಣಿಕತೆಯನ್ನು ಮೆಚ್ಚಬೇಕೆನ್ನುತ್ತಾಳೆ. ಕಾಶಿರಾಜ ನಿರ್ಗಮಿಸುತ್ತಾನೆ. ಆಗ ದಾಸಿ ಅಂಬೆಯನ್ನುದ್ದೇಶಿಸಿ ಮಹಾರಾಜರ ಮನಸ್ಸನ್ನು ನೋಯಿಸಿ, ಅವರಿಗೆ ಬೇಸರವನ್ನುಂಟುಮಾಡಿದ್ದೀರೆಂದು ಆಕ್ಷೇಪಿಸುತ್ತಾಳೆ. ಇದಕ್ಕೆ ಕಟುವಾಗಿಯೇ ಉತ್ತರಿಸುವ ಅಂಬೆ ನನ್ನ ಮಾತಿನಿಂದ ಅವರ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಿದ್ದು ನನಗೆ ಸಂತೋಷವನ್ನುಂಟುಮಾಡಿದೆ ಎನ್ನುತ್ತಾಳೆ. ಇದು ಕೇವಲ ಓರ್ವ ಗಂಡಸಿನ ಸ್ವಾಭಿಮಾನದ ಪ್ರಶ್ನೆಯಲ್ಲ, ಇಡೀ ಗಂಡು ಕುಲದ ಸ್ವಾಭಿಮಾನವನ್ನೇ ಪ್ರಶ್ನಿಸುವಂತಿದೆ. ಎಳೆಯ ವಯಸ್ಸಿನ ನಾಗಕನ್ಯೆಯ ಬಗೆಗೆ ಕನಿಕರ ಪಡುತ್ತಾಳೆ. ವೃದ್ಧನ ಜೊತೆಯ ಅವಳ ದಾಂಪತ್ಯವನ್ನು ಊಹಿಸಿ ಅಸಹ್ಯ ಪಟ್ಟುಕೊಳ್ಳುತ್ತಾಳೆ. ಹಾಗೆಯೇ ನಾಳಿನ ತನ್ನ ಸ್ವಯಂವರದಲ್ಲಿ ತನ್ನ ತಂದೆಯಂತಹ ಮುದಿಯನೋರ್ವ, ಹತ್ಹತ್ತು ಮದುವೆಯಾದವನೋರ್ವ ತನ್ನನ್ನು ವರಿಸಿಬಿಟ್ಟರೆ ಎಂದು ಚಿಂತಿತಳಾಗಿ, ಈ ಸ್ವಯಂವರ ಪದ್ಧತಿಯನ್ನೇ ನಿಲ್ಲಿಸಬೇಕು. ಭವ್ಯ ಭವಿಷ್ಯದ ಕನಸ್ಸನ್ನು ಹೊತ್ತ ಹೆಣ್ಣುಮಕ್ಕಳ ಬಾಳು ಹಾಳಾಗುವುದನ್ನು ತಡೆಯಬೇಕು. ತರುಣ ತರುಣನ ಕೈಹಿಡಿಯುವಂತಗಾಬೇಕೆಂದು ಹಂಬಲಿಸುತ್ತಾ, ತಾನು ರಾಜಕುಮಾರಿಯಾಗಿ ಹುಟ್ಟಿದ್ದಕ್ಕಾಗಿ ಪಶ್ಚಾತಾಪ ಪಡುತ್ತಾ, ದೇವರನ್ನು ಆಕ್ಷೇಪಿಸುತ್ತಾಳೆ. ನಂತರ ತನ್ನ ಆಭರಣಗಳನ್ನೆಲ್ಲಾ ಕಳಚಿಟ್ಟು ಹೊರನಡೆಯುತ್ತಾಳೆ.

ಹೀಗೆ ಹೊರ ನಡೆದ ಅಂಬೆ ದಟ್ಟ ಕಾಡಿನಲ್ಲಿ ಕ್ರಮಿಸುತ್ತಾಳೆ (ನಡೆಯುತ್ತಾಳೆ). ಇವಳ ಉದ್ದೇಶ ಸಾಯುವುದಾಗಿತ್ತು. ನಾಳಿನ ಸ್ವಯಂವರಕ್ಕಿಂತ ಸಾವೇ ಮೇಲೆನಿಸುತ್ತದೆ ಅಂಬೆಗೆ. ಅಂಬೆ ಅರಮನೆಯಲ್ಲಿ ಇಲ್ಲದಿರುವ ಸಂಗತಿಯನ್ನು ದಾಸಿ ಮಹಾರಾಜರಿಗೆ ತಿಳಿಸುತ್ತಾಳೆ. ಮಗಳು ಕಾಣೆಯಾಗಿದ್ದಾಳೆ ಎಂಬ ದುಃಖಕ್ಕಿಂತ ಕಾಶಿರಾಜನಿಗೆ ತನ್ನ ಪ್ರತಿಷ್ಠೆಯೇ ಮುಖ್ಯವಾಗುತ್ತದೆ. ಇವಳ ಈ ನಡತೆಯಿಂದ ತನ್ನ ಪ್ರತಿಷ್ಠೆ ಏನಾಗಬೇಡ ಎಂದು ತನ್ನ ಅಸಹನೆಯನ್ನು ವ್ಯಕ್ತಪಡಿಸುತ್ತಾನೆ. ಆ ಹೊತ್ತಿಗಾಗಲೇ ರಾಜಕುಮಾರಿ ಅಂಬೆ ಸೌಬಲದೇಶದ ದೊರೆ ಶಾಲ್ವನ ಜೊತೆ ಬರುತ್ತಿರುವ ಸಂಗತಿಯನ್ನು ಸೇನಾನಾಯಕ ಕಾಶಿರಾಜನಿಗೆ ತಿಳಿಸುತ್ತಾನೆ. ಶಾಲ್ವರಾಜ ಅಂಬೆಯ ಕೈ ಹಿಡಿದಿರುತ್ತಾನೆ. ಅಂಬೆ ಅವನಿಂದ ತನ್ನ ಕೈಯನ್ನು ಕೊಸರಿ ಬಿಡಿಸಿಕೊಂಡು ಶಾಲ್ವರಾಜ ತನ್ನನ್ನು ರಕ್ಷಿಸಿದ್ದಕ್ಕಾಗಿ ಆಕ್ಷೇಪಿಸುತ್ತಾಳೆ. ತಾನು ಸಾಯಬೇಕಾಗಿತ್ತು ಎನ್ನುತ್ತಾಳೆ. ಶಾಲ್ವರಾಜ ಅವಳ ಮಾತಿನ ಕಡೆ ಗಮನ ಕೊಡದೆ ತಾನು ಅಂಬೆಯನ್ನು ರಕ್ಷಿಸಿದ ಸಂದರ್ಭವನ್ನು ರಾಜನಿಗೆ ವಿವರಿಸುತ್ತಾನೆ. ರಾಜಕುಮಾರಿ ಅರಣ್ಯದಲ್ಲಿ ಓರ್ವರೆ ತೆರಳುತ್ತಿದ್ದಾಗ ಹುಲಿಯೊಂದು ಅವಳ ಮೇಲೆರಗಲು ಸಿದ್ಧವಾಗಿದ್ದಾಗ ತಾನು ಒಂದೇ ಬಾಣದಿಂದ ಹುಲಿಯನ್ನು ಕೊಂದು ಅಂಬೆಯನ್ನು ರಕ್ಷಿಸಿದ್ದು ನಂತರ ನಾಳಿನ ಸ್ವಯಂವರದಲ್ಲಿ ಭಾಗವಹಿಸಲು ಬಂದಿದ್ದಾಗಿ ತಿಳಿಸುತ್ತಾನೆ.

ಈ ಮಾತು ಕೇಳಿ ಕಾಶಿರಾಜನಿಗೆ ಸಂತೋಷವಾಗುತ್ತದೆ. ಶಾಲ್ವನಿಗೆ ಅಂಬೆಯ ಮೇಲೆ ಮೋಹವುಂಟಾಗಿದೆ (ಪ್ರೀತಿ) ಅವಳನ್ನು ಪ್ರೀತಿ ತುಂಬಿದ ಕಣ್ಣುಗಳಿಂದ ನೋಡುತ್ತಾನೆ. ಈ ಸಂದರ್ಭದಲ್ಲಿ ಅಂಬೆ ಶಾಲ್ವರಾಜನಿಗೆ ನನ್ನನೇಕೆ ಹುಲಿಯಿಂದ ರಕ್ಷಿಸಿದಿರಿ ಎಂದು ಪ್ರಶ್ನಿಸಿದಾಗ, ಅದೊಂದು ಅನಿರೀಕ್ಷಿತ ಸಂಭ್ರವೆಂದು, ನೀವೇಕೆ ಆ ಕಾಡಿಗೆ ಹೋಗಿದ್ದಿರೆಂದು ಶಾಲ್ವ ಪ್ರಶ್ನಿಸುತ್ತಾನೆ ಅದಕ್ಕೆ ಅಂಬೆ ನೀವು ಅಲ್ಲಿ ನನ್ನನ್ನು ಭೇಟಿಯಾಗುತ್ತಿರೆಂದು ಗೊತ್ತಿತ್ತು, ಅದಕ್ಕಾಗಿ ಹೋಗಿದ್ದೆ ಎಂದು ವ್ಯಂಗ್ಯವಾಗಿ ನುಡಿಯುತ್ತಾಳೆ ಅಲ್ಲದೆ ತಾನು ಸಾಯುವುದಕ್ಕಾಗಿ ಹೋಗಿದ್ದೆ ಎಂದಾಗ, ಶಾಲ್ವನಿಗೆ ಆಶ್ಚರ್ಯವಾಗುತ್ತದೆ. ಅಂಬೆಯ ಮನಸ್ಸಿನಲ್ಲಿ ಬೇರೆ ಪುರುಷನೋರ್ವನಿರಬೇಕೆಂದು, ಅದಕ್ಕಾಗಿ ಸಾಯಲು ಹೊರಟಿದ್ದಾಳೆಂದು ಊಹಿಸುತ್ತಾನೆ. ಆದ್ದರಿಂದ ಸ್ವಯಂವರದಲ್ಲಿ ಭಾಗವಹಿಸುವ ಅಗತ್ಯವಿಲ್ಲವೆಂದು ಅಭಿಪ್ರಾಯ ಪಡುತ್ತಾನೆ. ಅದಕ್ಕೆ ಅಂಬೆ ಹಾಗೇನೂ ಇಲ್ಲ, ನನಗೆ ಸ್ವಯಂವರ ಒಂದು ವಿಧದಲ್ಲಿ ಹೆಣ್ಣುಗಳ ಹರಾಜಿನಂತೆ ತೋರುತ್ತಿದೆ, ನನ್ನ ತಂದೆ ಸ್ವಯಂವರದಲ್ಲಿ ಎಳೆಯ ವಯಸ್ಸಿನ ರಾಜಕುಮಾರಿಯನ್ನು ವರಿಸಿದ್ದಾರೆ. ಹಾಗೆಯೇ ನಾಳೆಯ ಸ್ವಯಂವರದಲ್ಲಿ ನನ್ನನ್ನು ಕೂಡ ಒಬ್ಬ ವೃದ್ಧ ದೊರೆ ವರಿಸುತ್ತಾನೆಂಬ ಭಯ, ಅದಕ್ಕಾಗಿ ಸಾಯಲು ತೆರಳಿದೆ ಎನ್ನುತ್ತಾಳೆ. ಇದರಿಂದ ಶಾಲ್ವ ಸಂತೋಷಗೊಳ್ಳುತ್ತಾನೆ. ಅಂಬೆಯ ಕೈಹಿಡಿಯುತ್ತಾನೆ. ಇದರಿಂದ ಕಾಶಿರಾಜ, ದಾಸಿಗೆ ಸಂತೋಷವಾಗುತ್ತದೆ. ಹೀಗೆ ಅಂಬೆಯನ್ನು ಕಾಡುತ್ತಿದ್ದ ದುಃಖ, ತಳಮಳ, ಭಯ ನಿವಾರಣೆಯಾಗಿ ಅಂಬೆ ಸಂತೋಷವಾಗಿದ್ದಾಳೆ.

ದೃಶ್ಯ -೨

ಕಾಶಿರಾಜನ ಮಕ್ಕಳಾದ ಅಂಬೆ - ಅಂಬಿಕೆ ಅಂಬಾಲಿಕೆಯರ ಸ್ವಯಂವರದ ದಿನ ಅಂಬೆ ತನ್ನ ಅರಮನೆಯಲ್ಲಿ ಸ್ವಯಂವರ ಮಂಟಪಕ್ಕೆ ತೆರಳಲು ಸಿದ್ದಳಾಗುತ್ತಿದ್ದಾಳೆ. ಆ ಹೊತ್ತಿಗಾಗಲೇ ಸ್ವಯಂವರ ಮಂಟಪದ ಕಡೆಯಿಂದ ಗದ್ದಲ-ಗಲಾಟೆ ಕೇಳಿ ಬರುತ್ತದೆ. ಆ ಹೊತ್ತಿಗಾಗಲೇ ಕುರುಪಿತಾಮಹ, ಪರುಶುರಾಮರ ಶಿಷ್ಯ, ಅಪ್ರತಿಮ ವೀರನಾದ ಭೀಷ್ಮ ಅಂಬೆಯ ಅರಮನೆಯನ್ನು ಪ್ರವೇಶಿಸುತ್ತಾನೆ. ಅಪರಿಚಿತನಾದ ಭೀಷ್ಮನ ಪ್ರವೇಶದಿಂದ ಅಂಬೆ ಅಪ್ರತಿಭಳಾಗುತ್ತಾಳೆ. ಭೀಷ್ಮ ತಾನು ಬಂದ ಉದ್ದೇಶವನ್ನು ಹೇಳುತ್ತಾನೆ ಅಂಬೆಯ ಇಬ್ಬರು ಸಹೋದರಿಯರನ್ನು ವಶಪಡಿಸಿಕೊಂಡಿರುವುದನ್ನು ತಿಳಿಸುತ್ತಾನೆ. ಆ ಹೊತ್ತಿಗೆ ಕಾಶಿರಾಜನ ಪ್ರವೇಶವಾಗಿರುತ್ತದೆ. ಕಾಶಿರಾಜ ಭೀಷ್ಮನನ್ನು ಕಂಡು ಸಂತೋಷಪಡುತ್ತಾನೆ. ತಂದೆಯ ಹಿಂದೆ ಬಂದವನು ಭೀಷ್ಮನೆಂದು ತಿಳಿದ ಅಂಬೆ ಭೀಷ್ಮನ ವರ್ತನೆಯನ್ನು ಖಂಡಿಸುತ್ತಾಳೆ. ಭೀಷ್ಮ ಅಂಬೆಯ ಸಂವಾದದ ಸಂದರ್ಭದಲ್ಲಿ ಅಂಬೆ ಸ್ತ್ರೀ ಜಾತಿಗೆ ಆಗುತ್ತಿರುವ ಅವಮಾನವನ್ನು ಖಂಡಿಸುತ್ತಾಳೆ. ಅದಕ್ಕಾಗಿ ವ್ಯಥೆ ಪಡುತ್ತಾಳೆ. ಗೆದ್ದ ತನ್ನನ್ನು ಬ್ರಹ್ಮಚಾರಿಯಾದ ಭೀಷ್ಮ ತಾನು ವರಿಸದೆ, ತನ್ನ ಸಹೋದರ (ಚಿಕ್ಕಮ್ಮಳ ಮಗ) ವಿಚಿತ್ರವೀರ್ಯನಿಗೆ ಅರ್ಪಿಸುವ ಭೀಷ್ಮನ ನಡೆಯನ್ನು ಹೇಡಿಯ ನಡೆಯೆಂದು ಖಂಡಿಸುತ್ತಾಳೆ. ಅಂಬೆಯ ಈ ದಿಟ್ಟತನದ ನಡೆ ಹೆಣ್ಣಿನ ಆತ್ಮ ಗೌರವದ ನಡೆಯಾಗಿದೆ. ತನ್ನೊಡನೆ ಬರಲು ನಿರಾಕರಿಸುವ ಅಂಬೆಯನ್ನು ಎಳೆದೊಯ್ಯಲು ಮುಂದಾದ ಭೀಷ್ಮನ ವರ್ತನೆಯನ್ನು 'ಅತ್ಯಾಚಾರ'ದ ಬಗೆಯೆಂದು ಪ್ರತಿಭಟಿಸುತ್ತಾಳೆ. ಆದರೂ ಭೀಷ್ಮ ಹೀಗೆ ಹೊತ್ತೊಯ್ಯುವ ವಿವಾಹ ಪದ್ಧತಿಯು ರಾಕ್ಷಸ ಪದ್ಧತಿ ಎಂದು ಹೇಳುತ್ತ, ಅವಳ ಕೈಹಿಡಿದು ಎಳೆದೊಯ್ಯಲು ಸಿದ್ಧನಾಗುತ್ತಾನೆ ಆ ಹೊತ್ತಿಗೆ ಶಾಲ್ವನ ಪ್ರವೇಶವಾಗುತ್ತದೆ. ಭೀಷ್ಮನ ಈ ನಡೆಯನ್ನು ಶಾಲ್ವ ಕೂಡ ಖಂಡಿಸುತ್ತಾನೆ. ಅಲ್ಲದೆ ಯಾವ ಕಾರಣಕ್ಕೂ ಅಂಬೆಯನ್ನು ಹೊತ್ತೊಯ್ಯಲು ಬಿಡುವುದಿಲ್ಲವೆಂದು, ಭೀಷ್ಮನ ಎಚ್ಚರಿಕೆಯ ಮಾತುಗಳನ್ನು ಗಣಿಸದೆ (ಲೆಕ್ಕಿಸದೆ) ಭೀಷ್ಮನ ಜೊತೆ ಶಾಲ್ವ ಯುದ್ಧಕ್ಕೆ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ಕಾಶಿರಾಜ ಮಗಳಾದ ಅಂಬೆಯನ್ನು ಸಮಾಧಾನ ಪಡಿಸುತ್ತ, ಭೀಷ್ಮನೊಂದಿಗೆ ತೆರಳುವುದು ಉತ್ತಮವೆಂದು, ಹಸ್ತಿನಾವತಿಯ ಸಂಬಂಧದಿಂದ ಕಾಶಿರಾಜ್ಯದ ಪ್ರತಿಷ್ಠೆ ಹೆಚ್ಚಾಗುವುದೆಂದು ಹೇಳಿದ್ದನ್ನು, ಅಂಬೆ ತಿರಸ್ಕರಿಸುತ್ತಾಳೆ. ಆ ಹೊತ್ತಿಗೆ ಶಾಲ್ವ ಸೋತ ಸುದ್ದಿಯನ್ನು ದಾಸಿ ತಿಳಿಸುತ್ತಾಳೆ ಭೀಷ್ಮ ಶಾಲ್ವನನ್ನು ಎಳೆದುಕೊಂಡು ಬರುತ್ತಾನೆ. ಸೋತು

ನಿಲ್ಲಲಾರದ ಸ್ಥಿತಿಯಲ್ಲಿರುವ ಶಾಲ್ವ ನೆಲದ ಮೇಲೆ ಉರುಳಿ ಬಿದ್ದಾಗ ಅವನನ್ನು ಅಂಬೆ ಸಂತೈಸುತ್ತಾಳೆ. ಇವಳ ಈ ನಡೆ ಭೀಷ್ಮನಿಗೆ ಅಚ್ಚರಿಯನ್ನುಂಟುಮಾಡುತ್ತದೆ. ಆಗ ಅಂಬೆ ಶಾಲ್ವನನ್ನು ಇಷ್ಟ ಪಟ್ಟಿರುವ ವಿಚಾರ ತಿಳಿದು, ಶಾಲ್ವನ ಜೊತೆಯೆ ಅವಳ ವಿವಾಹ ನೆರವೇರಿಸುವಂತೆ ಹೇಳಿ ಭೀಷ್ಮ ನಿರ್ಗಮಿಸುತ್ತಾನೆ. ಕಾಶಿರಾಜನೂ ಹೊರಡಲನುವಾಗುತ್ತಾನೆ. ದಾಸಿ ರಾಜನನ್ನು ತಡೆದಾಗ ಕಾಶಿರಾಜ, ಅಂಬೆ ಶಾಲ್ವನನ್ನು ಮದುವೆಯಾಗಲು ತಾನೇ ನಿರ್ಧರಿಸಿದ್ದಾಳೆ ಹಾಗಾಗಿ ತನ್ನ ಕಲ್ಯಾಣವನ್ನು ತಾನೇ ಮಾಡಿಕೊಳ್ಳಲಿ ಎಂದು ಹೇಳಿ ತಾನೂ ನಿರ್ಗಮಿಸುತ್ತಾನೆ. ಇಲ್ಲಿ ಕಾಶಿರಾಜ ಪ್ರತಿಷ್ಠೆಗೆ ಬಲಿಯಾಗಿ ಮಗಳ ಭವಿಷ್ಯ, ಭಾವನೆಗಳನ್ನು ಕೊಂದಿದ್ದಾನೆ. ಪುರುಷ ಪ್ರಧಾನ ಸಮಾಜ ತನ್ನದೇ ಆದ ಕಟ್ಟುಪಾಡುಗಳನ್ನು ವಿಧಿಸಿಕೊಂಡು ಹೆಣ್ಣಿನ ಬೇಕು ಬೇಡಗಳಿಗೆ ಬೆಲೆ ಕೊಡದೆ ನಿರ್ದಯವಾಗಿ, ಹೆಣ್ಣುಕುಲವನ್ನು ತಿರಸ್ಕರಿಸುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಈ ಸಂದರ್ಭದಲ್ಲಿ ಅಂಬೆ ವಿಚಲಿತಳಾಗದೆ ದಿಟ್ಟತನದಿಂದ ಶಾಲ್ವನನ್ನು ಸಮಾಧಾನಪಡಿಸುತ್ತ, ನಿಮ್ಮ ರಾಜ್ಯಕ್ಕೆ ತೆರಳಿ ಸರಳವಾಗಿಯೇ ವಿವಾಹವಾಗೋಣ ನಡೆಯಿರಿ ಎಂದು ಶಾಲ್ವನಿಗೆ ಹೇಳಿದಾಗ, ಶಾಲ್ವ ಅಂಬೆಯ ಮಾತಿಗೆ ಒಪ್ಪದೆ ಸೋತ ನನಗೆ ಭೀಷ್ಮರು ನಿನ್ನನ್ನು ದಾನವಾಗಿ ನೀಡಿದ್ದಾರೆ ಸ್ವೀಕರಿಸಲು ಸಾಧ್ಯವಿಲ್ಲ, ಸ್ವೀಕರಿಸಿದೆನಾದರೆ ನಾನು ರಾಜ ಸಮೂಹದಲ್ಲಿ ಅಪಹಾಸ್ಯಕ್ಕೆ ಈಡಾಗುತ್ತೇನೆ. ನಾನು ಮಾತ್ರವಲ್ಲ ನೀನು ಕೂಡ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಅಂಬೆಯ ಪ್ರೀತಿಯ ನಿವೇದನೆಯನ್ನು ನಿರಾಕರಿಸುತ್ತಾನೆ. ಅಂಬೆ ಪರಿಪರಿಯಾಗಿ ಬೇಡಿಕೊಂಡರೂ ಅಂಬೆಯನ್ನು ಸ್ವೀಕರಿಸಲು ಒಪ್ಪಕೊಳ್ಳುವುದೇ ಇಲ್ಲ. ಆಗ ರೋಷಗೊಂಡ ಅಂಬೆ ಶಾಲ್ವನನ್ನು ನೀಚನೆಂದು, ನಪುಂಸಕನೆಂದು ನಿಂದಿಸಿ ಹೊರಡುವಂತೆ ಆರ್ಭಟಿಸುತ್ತಾಳೆ. ಈ ರೀತಿ ಅಂಬೆ ತಂದೆಯಿಂದ, ಇಷ್ಟಪಟ್ಟ ಶಾಲ್ವನಿಂದ, ತನ್ನನ್ನು ಗೆದ್ದ ಭೀಷ್ಮನಿಂದ ತಿರಸ್ಕೃತಗೊಳ್ಳುತ್ತಾಳೆ. ತಿರಸ್ಕೃತಗೊಂಡ ಅಂಬೆ ಇಡೀ ಸ್ತ್ರೀಕುಲದ ಪ್ರತಿನಿಧಿಯಾಗಿದ್ದಾಳೆ. ಭೀಷ್ಮ ಮೊದಲಾದವರ ನಡೆ ಪುರುಷ ಕುಲದ ಕ್ರೌರ್ಯ, ದಬ್ಬಾಳಿಕೆ, ಆಕ್ರಮಣವನ್ನು ಪ್ರತಿನಿಧಿಸುತ್ತದೆ. ಹೆಣ್ಣಿನ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯದ ಸಂಕೇತವಾಗಿದೆ ಇವರೆಲ್ಲರ ನಡೆ.

ಈ ಸಂದರ್ಭದಲ್ಲಿ ಸಾಯುವ ಬಗೆಗೆ ಮಾತನಾಡುವ ಅಂಬೆಗೆ ಸಮಾಧಾನ ಹೇಳುವವಳು, ಧೈರ್ಯ ತುಂಬುವವಳು ಅವಳ ನೆಚ್ಚಿನ ದಾಸಿ. ನೀವು ಸ್ವಾಭಿಮಾನಕ್ಕೆ ಹೆಸರಾದವರು, ''ಹೆಣ್ಣು ಹುಟ್ಟಿದರೆ ಅಂಬೆಯಂತೆ ಹುಟ್ಟಬೇಕು'' ಎಂದು ಹೆಸರಾದವರು. ಆದ್ದರಿಂದ ನೀವು ಧೃತಿಗೆಡದೆ, ಧೈರ್ಯದಿಂದ ಇವರೆಲ್ಲರ ಮೇಲೆ ಸೇಡು ತೀರಿಸಿಕೊಳ್ಳಿ ಎಂದು ಸಲಹೆ ನೀಡುತ್ತಾಳೆ. ಆಗ ಅಂಬೆ ನಪುಂಸಕನಾದ ಶಾಲ್ವನ ಮೇಲೆ ಸೇಡು ತೀರಿಸಿಕೊಳ್ಳುವ ಅವಶ್ಯಕತೆಯಿಲ್ಲ, ಅವನೊಬ್ಬ ಹೇಡಿ. ಭೀಷ್ಮನ ಮೇಲೆ ಸೇಡು ತೀರಿಸಿಕೊಳ್ಳುವ ಬಗೆಗೆ ಸಲಹೆ ಕೇಳಿದಾಗ, ಭೀಷ್ಮನಿಗೆ ತಾವು ಬ್ರಹ್ಮಚಾರಿ ಎಂಬ ಅಹಂಕಾರವಿದೆ. ಆ ಬ್ರಹ್ಮಚರ್ಯೆ ನಾಶವಾಗುವಂತೆ ಮಾಡಿ ಅವರ ಕೀರ್ತಿ ಮಣ್ಣುಪಾಲಾಗುವಂತೆ ಮಾಡೋಣ. ಅದಕ್ಕಾಗಿ ಗೆದ್ದ ನೀವೆ ನನ್ನನ್ನು ವರಿಸಿ ಎಂದು ಒತ್ತಾಯಿಸಿ, ಒಪ್ಪದಿದ್ದಾಗ ಅವರ ಗುರುಗಳಾದ ಪರಶುರಾಮರಲ್ಲಿಗೆ ಹೋಗಿ ವಿನಂತಿಸೋಣ, ಭೀಷ್ಮರು ಪರಶುರಾಮರ ಮಾತಿಗೆ ಧಿಕ್ಕರಿಸಲು ಸಾಧ್ಯವಿಲ್ಲ. ಈ ಮೂಲಕ ಭೀಷ್ಮರನ್ನು ನೀವು ವರಿಸಿ, ಅವರ ಬ್ರಹ್ಮಚರ್ಯೆ ಪ್ರತಿಜ್ಞೆಯನ್ನು ಮುರಿಯೋಣ ಎಂದು ಸಲಹೆ ನೀಡಿ ಅಂಬೆಯ ಸ್ವಾಭಿಮಾನವನ್ನು ಕೆರಳಿಸುತ್ತಾಳೆ ದಾಸಿ.

ದೃಶ್ಯ – ೩

ರಾಜಮಾತೆ ಸತ್ಯವತಿ (ವಿಚಿತ್ರವೀರ್ಯನ ತಾಯಿ)ಯ ಅರಮನೆ. ಭೀಷ್ಮನ ಆತ್ಮೀಯ ಮಿತ್ರ ಸತ್ಯಶೀಲ ಮತ್ತು ಸತ್ಯವತಿ, ಭೀಷ್ಮ ಅಂಬೆಯನ್ನು ತಿರಸ್ಕರಿಸಿ ಬಂದದ್ದು, ಅಂಬೆ ಪರಶುರಾಮರ ಮೊರೆ ಹೋದದ್ದು, ಇದರಿಂದ ಉದ್ಭವವಾಗಿರುವ ಸಂಕಟ (ಸಮಸ್ಯೆ)ವನ್ನು ಕುರಿತು ಸಂಭಾಷಿಸುತ್ತಿದ್ದಾರೆ. ಪರಶುರಾಮರು ಆಗಮಿಸುತ್ತಿರುವ ವಿಷಯ

ಸತ್ಯವತಿಯಲ್ಲಿ ಗಾಬರಿ-ಭಯಕ್ಕೆ ಕಾರಣವಾಗಿದೆ. ಎಲ್ಲಿ ಭೀಷ್ಮ ತನ್ನ ಗುರು ಪರಶುರಾಮರ ಮಾತನ್ನು ಕೇಳಿ ಬಿಡುತ್ತಾನೋ ಎಂದು ಗಾಬರಿಗೊಂಡಿದ್ದಾಳೆ. ಭೀಷ್ಮನ ಪ್ರತಿಜ್ಞೆಆತನ ಸತ್ಯಶೀಲ ವ್ಯಕ್ತಿತ್ವದ ಪರಿಚಯವಿರುವ ಸತ್ಯಶೀಲ ಸತ್ಯವತಿಗೆ ಯಾವ ಕಾರಣದಿಂದಲೂ ಭೀಷ್ಮ ತನ್ನ ಪ್ರತಿಜ್ಞೆಯನ್ನು ಮೀರಲಾರ ಎಂದು ಸಮಾಧಾನ ಹೇಳುತ್ತಿದ್ದಾನೆ. ಆದರೂ ಸತ್ಯವತಿಗೆ ನಂಬಿಕೆಯಿಲ್ಲ. ಇಬ್ಬರು ರಾಜಕುಮಾರಿಯರನ್ನು ತಂದ ಭೀಷ್ಮ, ಅಂಬೆಯನೇಕೆ ತರಲಿಲ್ಲವೆಂದು ಪ್ರಶ್ನಿಸುತ್ತಾಳೆ. ಅಂಬೆ ಮತ್ತೊಬ್ಬನನ್ನು ಅಂದರೆ ಶಾಲ್ವನನ್ನು ಪ್ರೀತಿಸುತ್ತಿದ್ದರಿಂದ ಅವಳನ್ನು ಹೇಗೆ ಕರೆತರಲು ಸಾಧ್ಯವಿಲ್ಲವೆಂದು ಸತ್ಯಶೀಲ ಸಮಾಜಾಯಿಷಿ ಕೊಡುತ್ತಾನೆ. ಸತ್ಯವತಿ ಭೀಷ್ಮನ ತಂದೆ ಶಂತನು ಮಹಾರಾಜ ಭೀಷ್ಮನಂತಹ ಮಗನಿದ್ದಾಗ ಕೂಡ, ತನ್ನನ್ನು ಮೋಹಿಸಿದ್ದು, ಮದುವೆಯಾದದ್ದನ್ನು ನೆನಪಿಸುತ್ತಾ, ಅವನ ಮಗನಾದ ಭೀಷ್ಮ ಕೂಡ ತನ್ನ ಪ್ರತಿಜ್ಞೆಯನ್ನು ಮರೆತು ಅಂಬೆಯನ್ನು ವರಿಸಿಬಿಟ್ಟರೆ ಎಂದು ಅನುಮಾನ ವ್ಯಕ್ತಪಡಿಸುತ್ತಾಳೆ. ಆಗ ಭೀಷ್ಮನ ಸ್ನೇಹಿತನಾದ ಸತ್ಯಶೀಲನಿಗೆ ಭೀಷ್ಮನ ವ್ಯಕ್ತಿತ್ವದ ಬಗ್ಗೆ ಅಪಾರಗೌರವವಿದೆ, ನಂಬಿಕೆಯಿದೆ. ಆದ್ದರಿಂದ ಆತ ಹೇಳುತ್ತಾನೆ 'ಭೀಷ್ಮನ ಪ್ರತಿಜ್ಞೆಯ ಬಗ್ಗೆ ನಿಮಗೆ ನಂಬಿಕೆಯಿಲ್ಲದಿರಬಹುದು ಆದರೆ ಜನರಿಗೆ ನಂಬಿಕೆಯಿದೆ. ಜನರ ನಂಬಿಕೆಯನ್ನು ಎಂದಿಗೂ ಭೀಷ್ಮ ಹುಸಿಗೊಳಿಸಲಾರ ಎನ್ನುತ್ತಾನೆ'. ಅಲ್ಲದೆ ಹಠಮಾರಿ ಅಂಬೆ ಋಷಿಮುನಿಗಳನ್ನು ಕಾಡಿಬೇಡಿ ಎಲ್ಲಿ ಭೀಷ್ಮ ತನ್ನ ಪ್ರತಿಜ್ಞೆಯನ್ನು ಮುರಿಯುವಂತೆ ಮಾಡುತ್ತಾಳೋ ಎಂದು ಭಯಪಡುತ್ತ, ಮಹರ್ಷಿ ಪರಶುರಾಮನನ್ನು ಈ ಕಾರ್ಯಕ್ಕೆ ಒಪ್ಪಿಸಿದ್ದಾಳಂತೆ, ಪರಶುರಾಮರು ಬರುತ್ತಿದ್ದಾರಂತೆ, ಬಂದು ಎಲ್ಲಿ ಭೀಷ್ಮರನ್ನು ಒಪ್ಪಿಸಿ ಬಿಡುತ್ತಾರೋ ಎಂದು ಅನುಮಾನಿಸುತ್ತಾಳೆ. ಎಲ್ಲಿ ತನ್ನ ಮಗ ವಿಚಿತ್ರವೀರ್ಯನಿಗೆ ಸಿಂಹಾಸನ ತಪ್ಪುತ್ತದೋ ಎಂದು ಭಯಗೊಂಡಿದ್ದಾಳೆ. ಹಾಗಾಗದೆಂದು ಹರಿಹರ ಬ್ರಹ್ಮಾದಿಗಳೂ ಬಂದು ಹೇಳಿದರು ಭೀಷ್ಮ ತನ್ನ ಪ್ರತಿಜ್ಞೆಯನ್ನು ಮುರಿಯಲಾರನೆಂದು ಸತ್ಯಶೀಲ, ಸತ್ಯವತಿಗೆ ಭರವಸೆ ನೀಡುತ್ತಾನೆ. ಆದರೂ ಸತ್ಯವತಿಗೆ ನಂಬಿಕೆ ಇಲ್ಲ. ಪರಶುರಾಮರ ಮಾತು ಕೇಳಿ ಎಲ್ಲಿ ಭೀಷ್ಮ ಅಂಬೆಯನ್ನು ವರಿಸಲು ಒಪ್ಪಿಬಿಡುತ್ತಾನೋ ಎನ್ನುತ್ತಾಳೆ. ಆ ಹೊತ್ತಿಗೆ ಪರಶುರಾಮರು ಭೀಷ್ಮರ ಜೊತೆಯಲ್ಲಿ ಸತ್ಯವತಿಯಿರುವಲ್ಲಿಗೆ ಬರುತ್ತಾರೆ.

ಹೀಗೆ ಬಂದ ಪರಶುರಾಮರು ಅಂಬೆಯನ್ನು ವರಿಸಿದ್ದೇ ಆದರೆ ಅದು ಎಲ್ಲರಿಗೂ ಕ್ಷೇಮವೆಂದು, ಕ್ಷತ್ರಿಯ ಕನ್ಯೆಯಾದ ಅಂಬೆಗೆ ಇರ್ವರು ಕ್ಷತ್ರಿಯರು (ಭೀಷ್ಮ ಮತ್ತು ಶಾಲ್ವ) ಅನ್ಯಾಯ ಮಾಡಿದ್ದಾರೆಂದು ಅಂಬೆಯ ಬಗೆಗೆ ಕನಿಕರ ವ್ಯಕ್ತಪಡಿಸುತ್ತಾರೆ. ಇವರ ಈ ಮಾತಿಗೆ ಸತ್ಯವತಿ ಆಕ್ಷೇಪಿಸುತ್ತಾಳೆ, ಕಾರಣ ಪರಶುರಾಮ ತನ್ನ ಜಮದಗ್ನಿಯನ್ನು ಕಾಮಧೇನುವಿಗಾಗಿ ರಾಜ ಸಹಸ್ರಾರ್ಜುನ ಕೊಂದ ಸೇಡಿಗಾಗಿ ಭೂಮಂಡಲದ ಕ್ಷತ್ರಿಯರೆಲ್ಲರನ್ನು ಕೊಲ್ಲುವ ಪ್ರತಿಜ್ಞೆ ಮಾಡಿ ಇಪ್ಪತ್ತೂರು ಬಾರಿ ಭೂಮಂಡಲವನ್ನು ಸುತ್ತಿ ಕ್ಷತ್ರಿಯರನ್ನು ಕೊಂದಿದ್ದಾನೆ. ಈಗ ಭೀಷ್ಮ ಅಂಬೆಯನ್ನು ಮದುವೆಯಾಗಲೆಬೇಕೆಂದು ಹೇಳುತ್ತಾನೆ. ಭೀಷ್ಮ ಒಪ್ಪುವುದಿಲ್ಲ. ಯುದ್ಧಕ್ಕೆ ಆಹ್ವಾನಿಸಿದಾಗಲೂ ಭೀಷ್ಮ ಒಪ್ಪುವುದಿಲ್ಲ. ರಾಜಮಾತೆ ಹೇಳಿದರೂ ಒಪ್ಪುವುದಿಲ್ಲವೆನ್ನುತ್ತಾನೆ ಭೀಷ್ಮ. ಆಗ ಇಬ್ಬರ ನಡುವೆ ಯುದ್ಧ ಪ್ರಾರಂಭವಾಗುತ್ತದೆ.

ಇದೇ ಸಮಯದಲ್ಲಿ ಸತ್ಯವತಿ ಸತ್ಯಶೀಲನ ಜೊತೆ ಯಮುನಾ ನದಿ ತೀರದಲ್ಲಿ ತಪಸ್ ನಿರತಳಾಗಿರುವ ಅಂಬೆಯಲ್ಲಿಗೆ ಬರುತ್ತಾಳೆ. ತನ್ನ ಮಗನಾದ ವಿಚಿತ್ರವೀರ್ಯನನ್ನು ವರಿಸುವಂತೆ ಕೇಳಿಕೊಳ್ಳುತ್ತಾಳೆ. ಅಂಬೆ ತಿರಸ್ಕರಿಸುತ್ತಾಳೆ. ವಿಚಿತ್ರವೀರ್ಯನನ್ನು ಶಕ್ತಿಹೀನನೆಂದು ಟೀಕಿಸುತ್ತಾಳೆ, ಅಲ್ಲದೆ ತನ್ನ ಎರಡು ನಿರ್ಧಾರಗಳನ್ನು ತಿಳಿಸುತ್ತಾಳೆ. ಒಂದು ಭೀಷ್ಮನನ್ನು ಮದುವೆಯಾಗಿ ಅವನನ್ನು ವಚನಭ್ರಷ್ಟನನ್ನಾಗಿ ಮಾಡುವುದು ಇಲ್ಲವೆ ತಾನು ಸೋತು ದೇಹತ್ಯಾಗ ಮಾಡುತ್ತೇನೆ ಎಂದು ಹೇಳುತ್ತಾಳೆ. ಸತ್ಯವತಿ ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಹಸ್ತಿನಾವತಿಯ ಮಹಾರಾಣಿಯಾಗೆಂದು ಕೇಳುತ್ತಾಳೆ. ಅಂಬೆ ಒಪ್ಪುವುದಿಲ್ಲ. ಪರಶುರಾಮರು, ಭೀಷ್ಮನನ್ನು ಸೋಲಿಸುತ್ತಾರೆಂಬ ನಂಬಿಕೆ ಅಂಬೆಗೆ. ಆದರೆ ಅಂಬೆಯ ನಂಬಿಕೆ ಸುಳ್ಳಾಗುತ್ತದೆ. ಪರಶುರಾಮರೆ ಯುದ್ಧದಲ್ಲಿ ಸೋತಿದ್ದಾರೆ, ಭೀಷ್ಮ ಜಯಶೀಲನಾಗಿದ್ದಾನೆ. ಭೀಷ್ಮರ ಜಯದ ವಿಷಯ ತಿಳಿದು ಸತ್ಯವತಿ ಸಂತೋಷಪಡುತ್ತಾಳೆ. ಎಲ್ಲಿ ಪರಶುರಾಮರು

ಗೆದ್ದು, ಸೋತ ಭೀಷ್ಮ ಪರಶುರಾಮರು ಹೇಳಿದಂತೆ ಅಂಬೆಯನ್ನು ಮದುವೆಯಾಗಿಬಿಡುತ್ತಿದ್ದನೋ ಎಂದು ಭಯ ಪಟ್ಟಿದ್ದಳು. ಆ ರೀತಿಯಾಗಿದ್ದರೆ ತನ್ನ ಮಗ ವಿಚಿತ್ರವೀರ್ಯನಿಗೆ, ಆತನ ಮಕ್ಕಳಿಗೆ ಸಾಮ್ರಾಜ್ಯ ದೊರೆಯುತ್ತಿರಲಿಲ್ಲ ಎಂಬುದು ಸತ್ಯವತಿಯ ಆಲೋಚನೆ. ಇದಕ್ಕಾಗಿಯೇ ಸತ್ಯವತಿ ವಿಚಿತ್ರವೀರ್ಯನನ್ನು ವರಿಸುವಂತೆ ಅಂಬೆಯನ್ನು ಬೇಡುತ್ತಿದ್ದಳು, ಈಗ ಸತ್ಯವತಿ ನಿರಾಳವಾದಳು ಅಂದರೆ ನಿಶ್ಚಿಂತಳಾದಳು. ಈ ಪ್ರಸಂಗ ಸತ್ಯವತಿಯ ಸ್ವಾರ್ಥವನ್ನು ಬಲಹೀನನಾದ ಮಗ ವಿಚಿತ್ರವೀರ್ಯನ ಮೇಲಿರುವ ಮೋಹವನ್ನು ತೋರುತ್ತದೆ. ಮನುಷ್ಯ ಮಹಾನ್ ಸ್ವಾರ್ಥಿ, ನಾಡಿನ ಹಿತಕ್ಕಿಂತ, ಸಮಾಜದ ಹಿತಕ್ಕಿಂತ ತಾನು, ತನ್ನ ಮಕ್ಕಳು, ತನ್ನ ವಂಶದ ಹಿತವೇ ಮುಖ್ಯವಾಗಿರುತ್ತದೆ ಮನುಷ್ಯನಿಗೆ ಮಹಾವೀರನಾದ ಭೀಷ್ಮ ಹಸ್ತಿನಾವತಿ ಸಾಮ್ರಾಜ್ಯದ ರಕ್ಷಕನಾಗಿರುತ್ತಾನೆ. ಕುರುವಂಶದ ಹಿತಚಿಂತಕನಾಗಿದ್ದಾನೆ. ತನ್ನ ತಂದೆಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ ಭೀಷ್ಮನ ಬಗೆಗೆ ಸತ್ಯವತಿಗೆ ಕಿಂಚಿತ್ತೂ ವಿಶ್ವಾಸವಿಲ್ಲ, ನಂಬಿಕೆಯಿಲ್ಲ, ಪ್ರೀತಿಯಿಲ್ಲ.

ಸೋತ ಪರಶುರಾಮ ಅಂಬೆಯಿರುವಲ್ಲಿಗೆ ಬಂದು, ತಮ್ಮ ಸೋಲಿನ ಸಂಗತಿಯನ್ನು ತಿಳಿಸುತ್ತಾರೆ. ಹಾಗೆಯೇ ಭೀಷ್ಮನ ಶೌರ್ಯವನ್ನು ಹೊಗಳುತ್ತಾರೆ. ಈ ಸಂದರ್ಭದಲ್ಲಿ ಅಂಬೆ ಪರಶುರಾಮರ ಬಗ್ಗೆ ಕೊಂಕು ನುಡಿಯುತ್ತಾಳೆ. ಬೇಕಂತಲೇ ಸೋತಿಲ್ಲ ತಾನೆ ಎಂದು ಪ್ರಶ್ನಿಸುತ್ತಾಳೆ. ಭೀಷ್ಮ ತನ್ನ ಪ್ರತಿಜ್ಞೆಗೆ ಬದ್ಧನಾಗಿದ್ದಾನೆಂದು, ಆತ ಪರಿಸ್ಥಿತಿಯ ಕೈಗೊಂಬೆ ಎನ್ನುತ್ತಾರೆ ಪರಶುರಾಮ. ಅಂಬೆ ಯಾವ ಮಾತಿನಿಂದಲೂ ಸಮಾಧಾನಗೊಳ್ಳುವುದಿಲ್ಲ ಅವಳ ಸೇಡಿನ ಭಾವನೆ ಮತ್ತಷ್ಟು ಪ್ರಜ್ವಲಿಸುತ್ತದೆ. ಭೀಷ್ಮರ ಸಾವಿನ ರಹಸ್ಯವನ್ನು ಕೋರುತ್ತಾಳೆ ಆಗ ಗುರುಗಳು ಆತನಿಗೆ ಶಿವ ನೀಡಿರುವ ವರದಿಂದ ಯಾವುದೇ ಗಂಡಿನಿಂದಾಗಲಿ, ಹೆಣ್ಣಿನಿಂದಾಗಲಿ ಸಾವಿಲ್ಲ ಎಂಬ ವರದ ರಹಸ್ಯವನ್ನು ಅರಿತ ಅಂಬೆ ಗಂಡು ಅಲ್ಲದ, ಹೆಣ್ಣು ಅಲ್ಲದ ಶಿಖಂಡಿಯಿಂದ ಭೀಷ್ಮರ ಸಾವೆಂದು ಅರಿತು ತನ್ನ ಸೇಡಿಗಾಗಿ ಪರಿತಪಿಸುತ್ತಾಳೆ. ಸೇಡಿಗಾಗಿ ಉರಿಯುತ್ತಿರುವ ಹೆಣ್ಣು ಏನು ಬೇಕಾದರೂ ಮಾಡಬಹುದೆಂದು ಭೀಷ್ಮನನ್ನು ಗೆಲ್ಲುವ, ತನ್ನ ಸೇಡನ್ನು ತೀರಿಸಿಕೊಳ್ಳುವ ಮಾತನಾಡುತ್ತಾಳೆ. ಭೀಷ್ಮನನ್ನು ಕ್ಷಮಿಸುವಂತೆ ಪರಶುರಾಮರು ಮಾಡಿದ ಮನವಿಗೆ ಅಂಬೆ ಕೋಪದಿಂದ, ಆಕ್ರೋಶದಿಂದ ಉತ್ತರಿಸುತ್ತಾಳೆ. ನೀವು ಸನ್ಯಾಸಿಗಳು, ಕ್ಷಮಿಸಿದ್ದೀರಿ, ನನ್ನ ಬಾಳನ್ನು ಹಾಳು ಮಾಡಿದ ಆ ನೀಚನನ್ನು ನಾನು ಕ್ಷಮಿಸಲಾರೆ ಎಂದ ಅಂಬೆ, ಪರಶುರಾಮರಿಂದ ಆಶೀರ್ವಾದವನ್ನು ಬೇಡಿ ಅವರು ತೆರಳಿದ ನಂತರ ಭೀಷ್ಮನ ಪ್ರತಿಜ್ಞೆಯನ್ನು, ಆ ಪ್ರತಿಜ್ಞೆಗಾಗಿ ತನ್ನ ಬಾಳನ್ನು ಹಾಳುಮಾಡಿದ್ದನ್ನು, ಅವನ ಬ್ರಹ್ಮಚರ್ಯೆಯನ್ನು, ಸತ್ಯವತಿಯ ಪುತ್ರವ್ಯಾಮೋಹವನ್ನು, ಅವಳ ಸ್ವಾರ್ಥವನ್ನು ಉಲ್ಲೇಖಿಸುತ್ತಾ, ಶಿವನನ್ನು ಕುರಿತು ತಪಸ್ಸು ಮಾಡಿ ಭೀಷ್ಮನನ್ನು ಕೊಲ್ಲುತ್ತೇನೆ. ಹೆಣ್ಣಿಗಾದ ಅನ್ಯಾಯವನ್ನು, ಅಪಮಾನ, ಅತೃಪ್ತಿಯ ಪರಿಣಾಮವೇನಾದೀತು ಎಂಬುದು ಈ ಭರತಖಂಡಕ್ಕೆ ತಿಳಿಯಲಿ ಎಂದು ಘೋಷಿಸುತ್ತಾ ತಪಸ್ಸಿಗೆ ತೆರಳುತ್ತಾಳೆ ಅಂಬೆ.

ಅಂಬೆ ಶಿಖಂಡಿಯಾಗಿ ಹುಟ್ಟಿ ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನ ಸಾಂಗತ್ಯದಲ್ಲಿ, ಭೀಷ್ಮನ ಎದುರಿಗೆ ಬಂದು ತನ್ನ ಸೇಡಿನ ಆಕ್ರೋಶದ ಬಾಣಗಳಿಂದ ಭೀಷ್ಮನ ದೇಹವನ್ನು ಛಿದ್ರಗೊಳಿಸಿ, ಭೀಷ್ಮನ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ.

ಹೀಗೆ ಅಂಬೆ ಹೆಣ್ಣಿನ ಸ್ವಾಭಿಮಾನದ ಅಸ್ಮಿತೆಯ ಪ್ರತಿನಿಧಿಯಾಗಿ ನಾಟಕದಲ್ಲಿ ಮೂಡಿ ಬಂದಿದ್ದಾಳೆ.